CL-2 (ವೈನ್ ಸ್ಟೋರ್)	₹. 51,75,000
CL-7 (ಲಾಡ್ಜಿಂಗ್ & ಬೋರ್ಡಿಂಗ್)	₹. 9,66,000
CL-8 (ಮಿಲಿಟರಿ ಕ್ಯಾಂಟೀನ್)	₹. 230
RVB (ರೀಟೈಲ್ ವೆಂಡ್ ಆಫ್ ಬೀರ್)	₹. 34,500
CL-9 (ಬಾರ್ & ರೆಸ್ಟೋರೆಂಟ್)	₹. 51,52,000
CL-11C (ಎಂ.ಎಸ್.ಐ.ಎಲ್)	₹. 3,45,000
Total (ಒಟ್ಟು)	₹. 1,16,72,730

ಬಸವ ವಸತಿ ಮನೆ ಹಂಚಿಕೆ

159(362) ಶ್ರೀ ರಾಜೀವ್ ಪಿ. (ಕುಡಚಿ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) 2013–14ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬಸವ ವಸತಿ ಮನೆಗಳನ್ನು ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಉಳಿದ ಕ್ಷೇತ್ರಗಳಿಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡದೇ ಇರಲು ಕಾರಣವೇನು ;

ಇ) ಈ ರೀತಿಯ ತಾರತಮ್ಯ ಮಾಡಲು ಕಾರಣವೇನು ;

ಈ) ಕುಡಚಿ ಮತ ಕ್ಷೇತ್ರದಲ್ಲಿ ಗುಡಿಸಲು ನಿವಾಸಿಗಳ ಸಂಖ್ಯೆ ಹೆಚ್ಚಾಗಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಕುಡಚಿ ಮತ ಕ್ಷೇತ್ರಕ್ಕೆ ಹೆಚ್ಚುವರಿ ಬಸವ ವಸತಿ ಯೋಜನೆ ಮನೆಗಳನ್ನು ನೀಡದೇ ಇರಲು ಕಾರಣವೇನು ;

ಊ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

ಡಾ॥ ಎಂ.ಎಚ್. ಅಂಬರೀಷ್ :– (ಮಾನ್ಯ ವಸತಿ ಸಚಿವರು) :–

ಅ), ಆ) ಮತ್ತು ಇ) ಬಸವ ವಸತಿ ಯೋಜನೆಯಡಿ ಹೆಚ್ಚುವರಿ ಗುರಿಯನ್ನು ಮಾನ್ಯ ಶಾಸಕರುಗಳ ಬೇಡಿಕೆಯ ಮೇರೆಗೆ ಅತಿ ಅವಶ್ಯವಿರುವ ಶಾಸಕರ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಯಾವುದೇ ಪಕ್ಷವಾರು ತಾರತಮ್ಯ ಮಾಡಿರುವುದಿಲ್ಲ.

ಈ) ಕುಡಚಿ ಮತ ಕ್ಷೇತ್ರದಲ್ಲಿ 2010ರಲ್ಲಿ ನಡೆಸಲಾದ ಗುಡಿಸಲು ವಾಸಿಗಳ ಸಮೀಕ್ಷೆ ಪ್ರಕಾರ 9428 ಫಲಾನುಭವಿಗಳು ಇರುವುದು ಕಂಡುಬಂದಿರುತ್ತದೆ.

ಕುಡಚಿ ಮತ ಕ್ಷೇತ್ರಕ್ಕೆ 2010 ರಿಂದ 2014 ರವರೆಗೆ 8662 ಮನೆಗಳನ್ನು ಮಂಜೂರು ಮಾಡಲಾಗಿದೆ.

ಉ) 2013–14ನೇ ಸಾಲಿಗೆ ಕುಡಚಿ ವಿಧಾನಸಭಾ ಕ್ಷೇತ್ರಕ್ಕೆ 300 ಹೆಚ್ಚುವರಿ ಮನೆಗಳ ಗುರಿಯನ್ನು ನೀಡಲಾಗಿದೆ.

ಊ) ಉದ್ಭವಿಸುವುದಿಲ್ಲ.

ಉನ್ನತೀಕರಿಸಿದ ಪ್ರೌಢ ಶಾಲೆಗೆ ವರ್ಗಾವಣೆ

160(363) ಶ್ರೀ ರಾಜೀವ್ ಪಿ. (ಕುಡಚಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪ್ರೌಢ ಶಾಲೆಗಳಿಗೆ ವರ್ಗಾವಣೆ ಮಾಡದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಹಾಗೂ ಉಚ್ಚ ನ್ಯಾಯಾಲಯದ ಆದೇಶ ಪಡೆದ ಶಿಕ್ಷಕರು ಮಾತ್ರ ವರ್ಗಾವಣೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ನ್ಯಾಯಾಲಯದ ಮೊರೆ ಹೋದ ಶಿಕ್ಷಕರನ್ನು ಮಾತ್ರ ವರ್ಗಾವಣೆಗೆ ಪರಿಗಣಿಸಿ, ಇನ್ನುಳಿದ ಶಿಕ್ಷಕರನ್ನು ಪರಿಗಣಿಸದೇ ಇರುವುದರ ಬಗ್ಗೆ ಸರ್ಕಾರದ ನಿಲುವು ಏನು;

ಈ) ಎಲ್ಲಾ ಶಿಕ್ಷಕರನ್ನು ಸಾಮಾನ್ಯ ವರ್ಗಾವಣೆ ನಿಯಮಕ್ಕೆ ಒಳಪಡಿಸಲು ಸರ್ಕಾರ ತೀರ್ಮಾನ ಕೈಗೊಳ್ಳದೇ ಇರುವ ಕಾರಣ ಏನು ; ಈ ರೀತಿಯ ಅಸಮಾನತೆ ಸರಿಪಡಿಸಲು ಸರ್ಕಾರ ಶೀಘ್ರ ಕ್ರಮಕೈಗೊಳ್ಳುವುದೇ ?